OS No. 28/2024

PW-1

**(ಇಂದು ದಿಃ 26-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು)**

**<u>ಪಾಟೀ ಸವಾಲುಃ- ಪ್ರತಿವಾದಿ ಪರ ಶ್ರೀ. SKD ವಕೀಲರಿಂದಃ-</u>**

ಈರಪ್ಪ ನನ್ನ ತಾತ. ಈರಪ್ಪ ನ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಈರಪ್ಪನಿಗೆ ಹಿರಿಯರಿಂದ ಬಂದಿವೆ. ದಾವಾ ಆಸ್ತಿಗಳು ಈರಪ್ಪನಿಗ ಹಿರಿಯರಿಂದ ಬಂದಿವೆ ಎಂದು ತೋರಿಸಲು ದಾಖಲಾತಿ ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿ ಉತ್ತರಿಸುತ್ತಿಲ್ಲ. ಈರಪ್ಪನಿಗೇ 4 ಜನ ಮಕ್ಕಳು . ಅವರುಗಳೆಂದರೆ ಆಶಪ್ಪ, ನಾಗಪ್ಪ, ರಾಚಪ್ಪ ಮತ್ತು ಬಸರಡ್ಡಿ . ಈ 4 ಜನರಿಗೆ ಒಟ್ಟು ಕುಟುಂಬದಲ್ಲಿ ಎಷ್ಟು ಜಮೀನು ಇತ್ತು ನನಗೆ  ಗೊತ್ತಿಲ್ಲ. ಆಶಪ್ಪ , ನಾಗಪ್ಪ, ರಾಚಪ್ಪ, ಮತ್ತು ಬಸರಡ್ಡಿ  ತೀರಿ ಹೋಗಿ ಎಷುಷ್ಟ ವರ್ಷ ಆಯಿತು ನನಗೆ ಗೊತ್ತಿಲ್ಲ. ನಾನು ಜನಿಸುವ ಮಂಚೆ 4 ಜನ  ತೀರಿ ಹೋಗಿದ್ದಾರೆ . ನಾಗಪ್ಪನ ಹೆಂಡತಿ ತೀರಿ ಹೋಗಿದ್ದಾರೆ . ಅವರಿಗೆ ಮಕ್ಕಳು ಇಲ್ಲ. ಆಶಪ್ಪನಿಗೆ ಕೂಡ ಮಕ್ಕಳಿಲ್ಲ. ಆಶಪ್ಪ , ನಾಗಪ್ಪ , ರಾಚಪ್ಪ , ಮತ್ತು ಬಸರಡ್ಡಿ  ಬದುಕಿದ್ದಾಗ  ದಾವಾ ಸರ್ವೆ ನಂಬರಗಳ ಸ್ವತ್ತುಗಳನ್ನು  ಭಾಗ ಮಾಡಿಕೊಂಡಿದ್ದರು. ನಾಗಪ್ಪನ ಭಾಗಕ್ಕೆ ದಾವಾ ಜಮೀನುಗಳಲ್ಲಿ  ಯಾವ ಜಮೀನುಗಳು ಬಂದಿದ್ದವು ಹೇಳಲು ಆಗುವುದಿಲ್ಲ. ಅದೇ ರೀತಿ ದಾವಾ ಸ್ವತ್ತುಗಳಲ್ಲಿ ಆಶಪ್ಪನಿಗ ಯಾವ ಜಮೀನುಗಳು ಭಾಗಕ್ಕೆ ಬಂದಿದ್ದವು ಹೇಳಲುಆಗುವುದಿಲ್ಲ. ನಾನು 1981 ರಲ್ಲಿ ಜನಸಿದ್ದೇನೆ. ನಾನು 8 ನೇ ತರಗತಿಯವೆರೆಗೆ ವಿದ್ಯಾಬ್ಯಾಸ ಮಾಡಿದ್ದೇನೆ. ಬಸರಡ್ಡಿ ತಂದೆ ಈರಪ್ಪನವರ ಭಾಗಕ್ಕೆ ದಾವಾ ಆಸ್ತಿಗಗಳಲ್ಲಿ ಯಾವಾ ಆಸ್ತಿಗಳು ಹೋಗಿದ್ದವುಕಿ ಹೇಳಲು ಆಗುವುದಿಲ್ಲ. ಅದೇ ರೀತಿ ರಾಚಪ್ಪನ ಭಾಗಕ್ಕೆ ದಾವಾ ಸ್ವತ್ತುಗಳಲ್ಲಿ ಯಾವ ಆಸ್ತಿಗಳು ಹೋಗಿದ್ದವು ಗೊತ್ತಿಲಲ. ಸಾಕ್ಷಿ ಮುಂದುವೆರದು ಆಗ ನಾವು ಚಿಕ್ಕವರು ಇದ್ದೇವು ಎಂದು ಹೇಳುತ್ತಾರೆ.ರಾಚಪ್ಪನಿಗೇ ಇಬ್ಬರು ಹೆಂಡತಿಯರು ಹಿರಿಯ ಹೆಂಡತಿ ಭೀಮಮ್ಮ ಎರಡನೇ

ಹೆಂಡತಿ ಗೀರಿಯಮ್ಮ . ಭೀಮಮ್ಮ  ಮತ್ತು ಗೀರಿಯಮ್ಮ ನಾನು ಜನಿಸುವ ಮುಂಚೆ ತೀರಿ ಹೋಗಿದ್ದಾರೆ . ಯಾವ ವರ್ಷ ತೀರಿ ಹೋಗಿದ್ದಾರೆ ಹೇಳಲು ಆಗುವುದಿಲ್ಲ, ಭೀಮಮ್ಮನಿಗೆ ಈರಪ್ಪ ಒಬ್ಬನೇ ಮಗ . ಗೀರಿಯಮ್ಮನಿಗೆ ನನ್ನ ತಂದೆ ಅನಂತರಡ್ಡಿ ಒಬ್ಬನೇ ಮಗ. ಅನಂತ ರಡ್ಡಿ ಮತ್ತು ಈರಪ್ಪನ ಮಕ್ಕಳು ಭಾಗ ಮಾಡಿಕೊಂಡಿದ್ದರು . ಈರಪ್ಪನಿಗೆ 6 ಜನ ಗಂಡು ಮಕ್ಕಳು ಮತ್ತು 5 ಜನ ಹೆಣ್ಣು ಮಕ್ಕಳು .

ನನ್ನ ತಂದೆ ಅನಂತರಡ್ಡಿಗೆ  ಮೂವರು ಹೆಂಡತಿಯರು . ಮೊದಲನೆ ಜಹೆಂಡತಿ ಗುಂಡಮ್ಮ, ಎರಡನೇ ಹೆಂಡತಿ ಮಲ್ಲಮ್ಮ ಮತ್ತು ಮೂರನೇ ಹೆಂಡತಿ ಪಾಪಮ್ಮ. ಗುಂಡಮ್ಮ 1993 ರಲ್ಲಿ ತೀರಿ ಹೋಗಿದ್ದಾರೆ . ಗುಂಡಮ್ಮ ನಿಗೆ ಮಕ್ಕಳು ಇರಲಿಲ್ಲ, ಮಲ್ಲಮ್ಮ 2004 ರಲ್ಲಿ ತೀರಿ ಹೋಗಿದ್ದಾರೆ. ಪಾಪಮ್ಮ 2020 ರಲ್ಲಿ ತೀರಿ ಹೋಗಿದ್ದಾರೆ . ನನ್ನ ತಂದೆ ಗುಂಡಮ್ಮವರನ್ನು ಯಾವ ವರ್ಷ ಮದುವೆ ಆಗಿದ್ದರು ಹೇಳಲು ಆಗುವುದಿಲ್ಲ, ಅದೇ ರೀತಿ ಮಲ್ಲಮ್ಮನನ್ನು ಮದುವೆ ಆದ ದಿನಾಂಕ ಹೇಳಲು ಆಗುವುದಿಲ್ಲ, ಸಾಕ್ಷಿ ಮುಂದುವರೆದು ಗುಂಡಮ್ಮ ಮತ್ತು ಮಲ್ಲಮ್ಮನನ್ನು ಒಂದೆ ಬಾರಿಗೆ ಒಂದೇ ಸಮಯದಲ್ಲಿ ನನ್ನ ತಂದೆ ಮದುವೆ ಆಗಿದ್ದರು ಎಂದು ಹೇಳುತ್ತಾರೆ. ಪಾಪಮ್ಮನ ಮದುವೆ ಯಾವ ವರ್ಷ ಆಯಿತು ಹೇಳಲು ಆಗವುದಿಲ್ಲ

ಸರ್ವೇ ನಂಬರ 23 ರಲ್ಲಿ  3 ತುಕಡಿಗಳು ಇವೆ. ಸರ್ವೇ ನಂಬರ 23 ಒಟ್ಟು 15 ಎಕರೆ ಚಿಲ್ಲರೆ ಗುಂಟೆ ಇದೆ. ಒಟ್ಟು 4 ತುಕಡಿ ಇದೆ. ವಾದ ಪತ್ರದಲ್ಲಿ ದಾವಾ ಸ್ವತ್ತುಗಳ ಚೆಕ್ ಬಂದಿ ತೋರಿಸಿಲ್ಲ ಎಂದರೆ ಸರಿ.  ಸರ್ವೇ ನಂಬರ 23/3 ರ ಆಸ್ತಿಯ ವರ್ಣನೆ ಮತ್ತು ಅದು ಯಾರ ಹೆಸರಿನಲ್ಲಿದೆ ಮತ್ತು ಚೆಕ್‌ಬಂದಿ ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ,   ಸರ್ವೇ

ನಂಬರ 27 ರಲಿಲ 2 ತುಕಡಿ ಇದೆ. ಸರ್ವೇ ನಂಬರ 27/1 ಯಾವ ದಿಕ್ಕಿಗೆ ಬರುತ್ತದೆ ಎಂದು ಹೇಳಿ ಬರೆಸಿಲ್ಲ ಎಂದರೆ ಸರಿ. ಅದೇ ರೀತಿ ಸರ್ವೇ ನಂಬರ 27/2 ಚೆಕ್ ಬಂದಿ ತೋರಿಸಿಲ್ಲ ಎಂದರೆ ಸರಿ. ಸರ್ವೇ ನಂಬರ 58 ರಲ್ಲಿ ತುಕಡಿ ಇಲ್ಲ, ಅದು 25 ಗುಂಟೆ ಇದೆ. ಸರ್ವೇ ನಂಬರ 58 ರ ಯಾವ ಹಿಸಾಗೆ ಈ ದಾವೆ ಸಲ್ಲಿಸಿದ್ದೇನೆ ಹೇಳಲು ಆಗುವುದಿಲ್ಲ. ದಾವಾ ಐಟೆಮ 6 ಚೆಕ್ ಬಂದಿ ತೋರಿಸಿಲ್ಲ ಎಂದರೆ ಸರಿ. ಸರ್ವೇ ನಂಬರ 10 ರಲ್ಲಿ ತುಕಡಿ ಇಲ್ಲ. ಸರ್ವೇ ನಂಬರ10 ರಲ್ಲಿ ನಮ್ಮ ಹಿಸೆ ಯಾವುದೆ ನೆನಪಿಲ್ಲ, ದಾವಾ ಐಟೆಮ 17 ರ ಚೆಕ್ ಬಂದಿ ತೋರಿಸಿಲ್ಲ ಎಂದರೆ ಸರಿ.

**(ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ. ಸರಿ ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಸೇಡಂ.**